ಓ.ಎಸ್. ನಂ.249/2021ರಲ್ಲಿ
ಪಿ.ಡಬ್ಲ್ಯೂ-1(ಎಂ.ನಾರಾಯಣಪ್ಪ)

ದಿನಾಂಕ 05-02-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 6ನೇ ಪ್ರತಿವಾದಿ ಪರ ಶ್ರೀ ಕೆ.ಕೆ., ವಕೀಲರಿಂದಃ-

2. ನನ್ನ ತಂದೆ ಆಸ್ತಿ ಮಾರಾಟ ಮಾಡಿದ ಕಾಲಕ್ಕೆ ನನ್ನ ವಯಸ್ಸು 22 ವರ್ಷ. ನನ್ನ ವಯಸ್ಸಿನ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಿನಾಂಕ 15.01.2021ರಂದು ಭಾಗ ಮಾಡಿಕೊಳ್ಳೋಣ ಎಂದು ಜಮೀನು ಖರೀದಿ ಮಾಡಿಕೊಂಡಿರುವವರನ್ನು ಕೇಳಿದೆವು. ನನ್ನ ದೊಡ್ಡಪ್ಪ ಮತ್ತು ಅವರ ಮಕ್ಕಳನ್ನು ಭಾಗ ಬೇಕೆಂದು ಕೇಳಿದ್ದೇನೆ. ಭಾಗ ಕೇಳಲು ನಮ್ಮ ಊರಿನ ಗ್ರಾಮಸ್ಥರು ಹೋಗಿದ್ದೆವು. ಸದರಿ ಗ್ರಾಮಸ್ಥರನ್ನು ಸಾಕ್ಷಿದಾರರಾಗಿ ದಾವೆಯಲ್ಲಿ ಮಾಡಿದ್ದೇನೆ. ಪಂಚಾಯಿತಿಗೆ ಜಮೀನು ತೆಗೆದುಕೊಂಡಿರುವವರಾದ ಪ್ರತಿವಾದಿ 5 ಮತ್ತು 6, ನಮ್ಮ ಗ್ರಾಮಸ್ಥರು ಸೇರಿದ್ದೆವು. ಪಂಚಾಯಿತಿ ಮಾಡಿದ್ದು ನಮ್ಮ ಮನೆಯ ಬಳಿ. ಪಂಚಾಯಿತಿ ಮಾಡಿದವರನ್ನು ದಾವೆಯಲ್ಲಿ ಸಾಕ್ಷಿದಾರರಾಗಿ ತೋರಿಸಿದ್ದೇವೆ. ಮಾರಾಟ ಮಾಡಿರುವ ವಿಚಾರ 1996ರಲ್ಲೇ ಗೊತ್ತಾಗಿದ್ದರೂ 2021ರವರೆಗೆ ಏನು ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ಹೋಗಿ ಕೇಳಿದೆವು, ಬರುತ್ತೇವೆ ಎಂದು ಹೇಳುತ್ತಿದ್ದರು, ಕೊನೆಯಲ್ಲಿ ಬಂದರು, ನಾನು ಜಮೀನು ಬಿಟ್ಟುಕೊಡಿ ಎಂದು ಕೇಳಿದಾಗ ಆಗುವುದಿಲ್ಲ ಎಂದು ಹೇಳಿದರು, ಅದಕ್ಕೆ ಕೇಸು ಹಾಕಿದೆವು ಎಂದು ನುಡಿಯುತ್ತಾರೆ.

3. ದಾವಾ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನಾವೇ ಇದ್ದೇವೆ ಎಂದು ನುಡಿಯುತ್ತಾರೆ. ಸ್ವಾಧೀನದಲ್ಲಿ ನಾವೇ ಇದ್ದೇವೆ ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅದು ಫೋಟೋ. ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನ ಖಾತೆ ಖರೀದಿ ಮಾಡಿರುವವರ ಹೆಸರಿಗೆ ಇತ್ತು. ಖಾತೆ ಈಗಲೂ ಖರೀದಿದಾರರ ಹೆಸರಿನಲ್ಲೇ ಇದೆ. ಖರೀದಿದಾರರು ಮೋಸ ಮಾಡಿದ್ದಾರೆಂದು ಹೇಳಲು ದಾಖಲೆ ಹಾಜರುಪಡಿಸಿದ್ದೇನೆ. ಕ್ರಯಪತ್ರದ

ಸಾಕ್ಷಿದಾರರನ್ನು ಈ ದಾವೆಯಲ್ಲಿ ಸಾಕ್ಷಿದಾರರಾಗಿ ತೋರಿಸಿಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.